ಆರೋಗ್ಯ

# ಮಹಿಳೆಯರನ್ನು ಕಾಡುವ ಉರಿಮೂತ್ರ ಸಂಕಟ

ಅನೇಕ ಕಾರಣಗಳಿಂದಾಗಿ ಮಹಿಳೆಯರಿಗೆ ಉರಿಮೂತ್ರದ ಸಂಕಟ ಉಂಟಾಗುತ್ತದೆ. ಮೂತ್ರಾಂಗವ್ಯೂಹದ ಸೋಂಕು ಕೂಡ ಇದಕ್ಕೆ ಒಂದು ಕಾರಣ. ನಿತ್ಯವೂ ಧಾರಾಳವಾಗಿ ನೀರು ಕುಡಿಯಬೇಕು. ಯಾವುದೇ ರೀತಿಯ ಸೋಂಕು ತಗುಲದಂತೆ ಎಚ್ಚರಿಕೆ ವಹಿಸಬೇಕು.



■ ಡಾ. ವೀಣಾ ಭಟ್, ಭದ್ರಾವತಿ

'ನಿನ್ನೆಯಿಂದ ಮೂತ್ರ ಮಾಡಲು ತುಂಬಾ ಕಷ್ಟ, ಪದೇ ಪದೇ ಬಾತ್‌ರೂಂಗೆ ಹೋಗಿ ಸಾಕು ಸಾಕಾಯಿತು', 40 ವರ್ಷ ಶಿಕ್ಷಕಿ ಸರಳಾ ಅಳಲು ತೋಡಿಕೊಂಡರು. ಅವಳಿಗೆ ಸ್ಕ್ಯಾನಿಂಗ್ ಮಾಡಿಸಿದಾಗ ಮೂತ್ರಕೋಶದಲ್ಲಿ ಕಲ್ಲಾಗಿರುವುದು ತಿಳಿದುಬಂದು ಚಿಕಿತ್ಸೆ ಕೊಡಲಾಯಿತು.

ಒಂದು ವಾರದ ಹಿಂದಷ್ಟೇ ಮದುವೆಯಾದ ನೀತು ಆಸ್ಪತ್ರೆಗೆ ಬರುವಾಗ ಹೆಜ್ಜೆಯಿಡಲೂ ಕಷ್ಟಪಡುವಷ್ಟು ಕೆಳಹೊಟ್ಟೆನೋವು, ಮೂತ್ರ ಮಾಡುವಾಗಲೂ ಅಸಾಧ್ಯ ನೋವಿನಿಂದ ಬಳಲುತ್ತಾ ಯಾಕಾದ್ರೂ ಮದುವೆ ಆದ್ನೋ ಅನಿಸುತ್ತಿದೆ ಎಂದು ಕಣ್ಣಲ್ಲಿ ನೀರೂರಿಸಿದರು. ಅವಳಿಗಾಗಿದ್ದು ಹನಿಮೂನ್ ಸಿಸ್ಟೈಟಿಸ್ (ಮದುವೆಯ ನಂತರ ಉಂಟಾಗುವ ಲೈಂಗಿಕ ಸಂಪರ್ಕದಿಂದುಂಟಾಗುವ ಮೂತ್ರಸೋಂಕು) ಕೆಲದಿನಗಳ ಹಿಂದೆ ಅವಳೇ 80 ವಯಸ್ಸಿನ ಅಜ್ಜಿಯನ್ನು ಮೂತ್ರ ಮಾಡಲು ಕಷ್ಟವೆಂದು ಕರೆತಂದಿದ್ದಳು. ಅಜ್ಜಿಯ ಮೂತ್ರಕೋಶ ಹಾಗೂ ಗರ್ಭಕೋಶ ಜಾರಿ ಹೊರಗೆ ಬಂದಿತ್ತು. ನಂತರ ಶಸ್ತ್ರಚಿಕಿತ್ಸೆಯ ನಂತರ ಈಗ ಆರಾಮವಾಗಿದ್ದಾರೆ.

ಹೀಗೆ ಮೂತ್ರ ಮಾಡುವ ತೊಂದರೆ, ಉರಿಮೂತ್ರ ಸಾಮಾನ್ಯವಾಗಿ ಬರುವಂತಹ ಸಮಸ್ಯೆಗಳು. ನೆಗಡಿ ಶೀತ, ಜ್ವರ ಹಾಗೆ ಕೆಲವೊಮ್ಮೆ ಲಕ್ಷಿಸದಿದ್ದರೆ, ಮುಂಜಾಗ್ರತೆ ವಹಿಸದಿದ್ದರೆ ನಂತರ ಮೂತ್ರಪಿಂಡದ ಸೋಂಕಾಗಿ ವೈಫಲ್ಯವೂ ಉಂಟಾಗಬಹುದು.

ಶರೀರದ ಕಲ್ಮಶಗಳನ್ನು ಹೊರಗೆ ಹಾಕುವ ಮುಖ್ಯ ಅಂಗವಾದ ಮೂತ್ರಾಂಗವ್ಯೂಹದ ಕಾರ್ಯ ಬಹಳ ಮುಖ್ಯವಾದದ್ದು. ಆದರೆ ಹೆಣ್ಣುಮಕ್ಕಳಲ್ಲೇ ಈ ಮೂತ್ರ ಸಂಬಂಧಿ ಸಮಸ್ಯೆಗಳು ಮುಖ್ಯವಾಗಿ ಮೂತ್ರದ ಸೋಂಕೂ ಉಂಟಾಗುವುದು ಬಹಳ ಹೆಚ್ಚು.

## ಮೂತ್ರಸೋಂಕಿಗೆ ಕಾರಣಗಳೇನು?

ಮಹಿಳೆಯರಲ್ಲಿ ಮೂತ್ರನಾಳ ಚಿಕ್ಕದಿದೆ (4 ಸೆಂ.ಮೀ) (ಪುರುಷರು20 ಸೆಂ.ಮೀ). ಮಹಿಳೆಯರ ಮೂತ್ರದ್ವಾರ, ಯೋನಿದ್ವಾರ ಅದರ ಸ್ವಲ್ಪ ಕೆಳಗೆ ಗುದದ್ವಾರ ಪರಸ್ಪರ ತೀರಾ ಹತ್ತಿರದಲ್ಲೇ ಇವೆ. ಆದ್ದರಿಂದ ಕ್ರಿಮಿಗಳು ನೇರವಾಗಿ ಮೂತ್ರನಾಳ, ಮೂತ್ರಕೋಶಕ್ಕೆ ನುಗ್ಗುವುದು ಸುಲಭ. ಇದರಿಂದಲೇ ಲೈಂಗಿಕವಾಗಿ ಸಕ್ರಿಯವಾಗಿರುವವರು ಪದೇ ಪದೇ ಮೂತ್ರಕೋಶದ ಸೋಂಕಿನಿಂದ ಬಳಲುತ್ತಾರೆ.

ಹೆಣ್ಣು ಮಕ್ಕಳು ಮೂತ್ರ ತಡೆದಿಡುವುದು ಸಾಮಾನ್ಯ. ಅನುಕೂಲಕರ ಶೌಚಾಲಯವಿಲ್ಲದೆಯೋ, ಸಂಕೋಚದಿಂದಲೋ ಮೂತ್ರಕೋಶದಿಂದಲೇ ಮೂತ್ರ ಅಡಕವಾಗಿದ್ದಾಗ ಮೂತ್ರದ ಸೋಂಕು ಹೆಚ್ಚಾಗುತ್ತದೆ.

ಮೂತ್ರಾಂಗವ್ಯೂಹದ ಕಾರ್ಯ ಹೇಗೆನ್ನುವುದು ತಿಳಿದಿರಬೇಕಲ್ಲವೇ? ಮಾನವನಲ್ಲಿ ಚಯಾಪಚಯ ಕ್ರಿಯೆಗಳ ಮೂಲಕ ಶಕ್ತಿ ಉತ್ಪಾದನೆಯಾಗಿ ಎಲ್ಲಾ ಚಟುವಟಿಕೆಗಳೂ ನಡೆಯುತ್ತವೆ. ಜೊತೆಗೆ ಯೂರಿಯ, ಯೂರಿಕ್‌ಆಮ್ಲ ಮುಂತಾದ ತ್ಯಾಜ್ಯವಸ್ತುಗಳೂ ಉತ್ಪತ್ತಿಯಾಗುತ್ತವೆ. ತ್ಯಾಜ್ಯ ವಸ್ತುಗಳನ್ನು ಎರಡು ಮೂತ್ರಪಿಂಡಗಳು ಮೂತ್ರದ ರೂಪದಲ್ಲಿ ಹೊರ ಸಾಗಿಸುತ್ತದೆ. ಮೂತ್ರಪಿಂಡಗಳು ಉದರಕುಳಿಯ ಮೇಲುಭಾಗದ ಹಿಂದುಗಡೆ ಕಶೇರುಕಕಂಬದ ಎರಡೂ ಬದಿಯಲ್ಲಿ ನೆಲೆಸಿದ್ದು ಎರಡು ಮೂತ್ರನಾಳಗಳು ಇದರಿಂದ ಹೊರಟು ಮೂತ್ರಕೋಶಕ್ಕೆ ಮಾತ್ರ ಸಾಗಿಸಿ ಅದು ತುಂಬಿದಾಗ ಮೂತ್ರವಿಸರ್ಜನೆಯ ಬಯಕೆಯಾಗಿ ಮೂತ್ರದ್ವಾರದ ಮೂಲಕ ಮೂತ್ರ ವಿಸರ್ಜನೆಯಾಗುತ್ತದೆ.

ಉರಿಮೂತ್ರಕ್ಕೆ/ ಮೂತ್ರವಿಸರ್ಜನೆಗೆ ತೊಂದರೆ ಉಂಟು ಮಾಡುವ ಕಾರಣಗಳೇನೆಂದರೆ.

- ಮೂತ್ರಕೋಶದ ಸೋಂಕಾಗಿದ್ದರೆ ಅಥವಾ ಕಲ್ಲುಗಳಿದ್ದರೆ
- ಕ್ಯಾನ್ಸರ್‌ನಲ್ಲಿ ವಿಕಿರಣ ಚಿಕಿತ್ಸೆ ಕೊಟ್ಟಾಗ
- ಸೈಕ್ಲೋಫಾಸ್ಫಮೈಡ್‌ನಂತಹ ಔಷಧಗಳ ಸೇವನೆಯಲ್ಲಿ, ಇಂತಹ ಸಂದರ್ಭದಲ್ಲಿ ಮೂತ್ರಮಾಡಿದ ನಂತರ ನೋವಾಗುತ್ತದೆ.
- ಸಿಸೇರಿಯನ್ ಹೆರಿಗೆ ಹಾಗೂ ಇನ್ನಿತರ ಗರ್ಭಕೋಶ ಸಂಬಂಧಿ ಶಸ್ತ್ರಚಿಕಿತ್ಸೆಯಲ್ಲಿ ಕ್ಯಾಥೆಟರ್ ಹಾಕುವಾಗ ನಿಯಮಗಳನ್ನು ಪಾಲಿಸದೇ ಇದ್ದರೆ ನಂತರ ಮೂತ್ರವಿರ್ಸಜನೆಗೆ ಕಷ್ಟವಾಗುವುದು.
- ಗರ್ಭಕೋಶ ಜಾರಿದಾಗ, ಮೂತ್ರಕೋಶವೂ ಜಾರಿ ಮೂತ್ರವಿಸರ್ಜನೆಗೆ ತೊಂದರೆ ಆಗಬಹುದು.

## ಮೂತ್ರದ್ವಾರದ ತೊಂದರೆ

ಮೂತ್ರದ್ವಾರ ಸೋಂಕು, ಕ್ರಿಮಿಗಳಿಂದ/ ಲೈಂಗಿಕ ಕಾಯಿಲೆಯಾದ ಗೊನೋರಿಯಾದಂಥ ಕಾಯಿಲೆಗಳಲ್ಲಿ, ಮೂತ್ರದ್ವಾರದಲ್ಲಿ